RNU AIR DHARWAD

# JANUARY 06, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಹಾಗೂ ಜೀವನೋಪಾಯ ಸಚಿವಾಲಯ ಮತ್ತು ರಾಷ್ಟ್ರೀಯ ನಗರ ಜೀವನೋಪಾಯ ಸಚಿವಾಲಯಗಳ ವತಿಯಿಂದ, ಧಾರವಾಡದ ಸೃಜನಾ ಅಣ್ಣಾಜಿರಾವ ಸಿರೂರ ರಂಗ ಮಂದಿರದಲ್ಲಿ, ಮೂರು ಮಳಿಗೆಗಳನ್ನು ಸ್ಥಾಪಿಸಲಾಗಿದೆ. ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ, ಒಟ್ಟು 31 ಮಳಿಗೆಗಳಿದ್ದು, ವಿವಿಧ ಇಲಾಖೆಗಳು ಹಾಗೂ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಹಾಗೂ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಒಟ್ಟು 1 ಲಕ್ಷ 75 ಸಾವಿರ ರೂಪಾಯಿ ವಹಿವಾಟು ನಿನ್ನೆ ದಾಖಲಾಗಿದೆ.

<><><>

ಸರ್ಕಾರಿ ಯೋಜನೆಗಳ ಸಕಾಲಿಕ ಅನುಷ್ಠಾನ ಮತ್ತು ರಾಷ್ಟ್ರೀಯ ಮಹತ್ವದ ಯೋಜನೆಗಳ ವೇಗವರ್ಧಿಸಲು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆರಂಭಿಸಿರುವ, 'ಪ್ರಗತಿ @ 50' ಕಾರ್ಯಕ್ರಮದಡಿ, ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಗೆ, ಮತ್ತ ್ಟ ವೇಗ ದೊರೆತಿದೆ. ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ, ಆರ್ಥಿಕ ಸಹಾಯವನ್ನು, ಈ ಯೋಜನೆ ಅಡಿ, ಒದಗಿಸಲಾಗುತ್ತಿದೆ. ತಾಯಿ ಮತ್ತು ಶಿಶುವಿನ ಆರೋಗ್ಯ ಸುಧಾರಣೆ, ಪೌಷ್ಟಿಕಾಂಶ ಹೆಚ್ಚಳದ ಗುರಿ ಹೊಂದಿದೆ. ಮೊದಲ ಮಗುವಿಗೆ 5 ಸಾವಿರ ಮತ್ತು ಎರಡನೇ ಹೆಣ್ಣು ಮಗುವಿಗೆ 6 ಸಾವಿರ ರೂಪಾಯಿ ನೀಡಲಾಗುತ್ತದೆ.

<><><>

ಭಾರತೀಯ ಮಾನಕ ಬ್ಯೂರೋ, ಬಿ.ಐ.ಎಸ್. 79ನೇ ಸಂಸ್ಥಾಪನಾ ದಿನವಿಂದು. ಗುಣಮಟ್ಟ, ಸುರಕ್ಷತೆ ಮತ್ತು ಶ್ರೇ ್ಠತೆಗೆ, ಅಚಲವಾದ ಸಂರಕ್ಷಣೆಗಾಗಿ, ಭಾರತೀಯ ಮಾನದಂಡಗಳ ಬ್ಯೂರೋವನ್ನು ಶ್ಲಾಘಿಸುವುದಾಗಿ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ.

<><><>

'ಜಲ ಜೀವನ್ ಮಿ ನ್ ಯೋಜನೆ' ಕಾಮಗಾರಿ ಹಾಗೂ ಶುದ್ಧ ಕುಡಿಯುವ ನೀರಿಗಾಗಿ, ಪಂಚಮಿತ್ರ ಸಹಾಯವಾಣಿ ಸಂಖ್ಯೆ, 827750 6000ಗೆ ಕರೆ ಅಥವಾ ವಾಟ್ಸಾಪ್ ಮೂಲಕ, ದೂರು ಸಲ್ಲಿಸಲು ಕೋರಲಾಗಿದೆ.

<><><>

'ವಿಕಸಿತ ಭಾರತ; ಜಿ–ರಾಮ್–ಜಿ ಯೋಜನೆ' ಅಡಿ, ಗ್ರಾಮೀಣ ಭಾಗದ ಕೃಷಿಕ ಕುಟುಂಬಗಳಿಗೆ, ಹೆಚ್ಚಿನ ಲಾಭ ತಟ್ಟುವಂತೆ ಯೋಜಿಸಿದ್ದಾಗಿ, ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ್, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ವಿವೇಕ (22) + ಶಿವರಾಜ್‌ಸಿಂಗ್ ಚೌವ್ಹಾಣ್ ಧ್ವನಿ (45) ಸೆಕೆಂದುಗಳು

<><><>

*ವಿಕಸಿತ ಭಾರತ, ಜಿ ರಾಮ್ ಜಿ ಯೋಜನೆ ಅಡಿ, ಕೇಂದ್ರ ಸರ್ಕಾರ ಹಲವು ಸಚಿವಾಲಯಗಳ ಸಹಯೋಗದೊಂದಿಗೆ, ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ, ಅಂತರ್ಜಲ ಮಟ್ಟ ವೃದ್ಧಿಗೆ ವಿಶೇಷ ಕಾಮಗಾರಿ, ಕೃಷಿಕರ ಅನುಕೂಲಕ್ಕಾಗಿ, ಆರ್ಥಿಕ ಅಭ್ಯುದಯಕ್ಕಾಗಿ, ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ಜೇನುಕೃಷಿ, ಕರಕುಶಲ ಕಲೆಗಾರಿಕೆಗೆ ಒತ್ತು ನೀಡಿ, 125 ದಿನಗಳ ಕೂಲಿ ಒದಗಿಸಿದೆ.*

<><><>

ಬೀದರ್‌ನ ಪಶು ವೈದ್ಯಕೀಯ ವಿಶ್ವವಿದ್ಯಾಲಯದಿಂದ, ದೇಶದಲ್ಲೇ ಮೊದಲ ಬಾರಿಗೆ ರೇಬಿಸ್ ನಿಯಂತ್ರಣಕ್ಕೆ, ಓರಲ್ ಡೋಜ್ ಅಭಿವೃದ್ಧಿ ಪಡಿಸಲಾಗಿದೆ. ಇನ್‌ಜೆಕ್ಷನ್ ಮೂಲಕ, ಲಸಿಕೆ ನೀಡಲು ಸಾಧ್ಯವಾಗದ, ಬೀದಿ ನಾಯಿಗಳಿಗೆ, ಮಾಂಸ ಅಥವಾ ಮೊಟ್ಟೆಯ ಮೂಲಕ, ರೇಬಿಸ್ ಲಸಿಕೆ ನೀಡುವ ಸಾಧ್ಯತೆ ಇದೆ.

<><><>

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಧಾರವಾಡದ ಐತಿಹಾಸಿಕ ಕೆಲಗೇರಿ ಕೆರೆಯಲ್ಲಿ, 'ಜಲ ಕಳೆ ತೆಗೆಯುವ ಯಂತ್ರದ, ಪ್ರಾಯೋಗಿಕ ಕಾರ್ಯಾಚರಣೆಯನ್ನು, ಯಶಸ್ವಿಯಾಗಿ ಕೈಗೊಂಡಿತು. ಜಲ ಕಳೆ ಸಸ್ಯಗಳನ್ನು, ಅತ್ಯಂತ ವೇಗವಾಗಿ ತೆರವುಗೊಳಿಸುವ ಸಾಮರ್ಥ್ಯವನ್ನು ಈ ಯಂತ್ರ ಹೊಂದಿದೆ. ಅವಳಿ ನಗರದ ಒಟ್ಟು 40 ಕೆರೆಗಳನ್ನು ಕಳೆ ಮುಕ್ತಗೊಳಿಸಿ, ನಿರ್ಮಲವಾಗಿರಿಸಲು, ಪಾಲಿಕೆ, ಈ ಯಂತ್ರವನ್ನು ಖರೀದಿಸಲು ನಿರ್ಧರಿಸಿದೆ.

<><><>

ಇ–ಸ್ವತ್ತು ಅಡಿ, '11 ಎ' ಖಾತೆ ಹಾಗೂ ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಲು, ಸದ್ಯದಲ್ಲೇ ಅವಕಾಶ ಕಲ್ಪಿಸಲಾಗುವುದು ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಈ ವರೆಗೆ ಆನ್‌ಲೈನ್‌ನಲ್ಲಿ, 21 ಸಾವಿರದ ನಾಲ್ಕನೂರಾ 29 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

<><><>

ಸಂಕಷ್ಟದಲ್ಲಿರುವ ಮಹಿಳೆಯರು ಹಾಗೂ ಮಕ್ಕಳಿಗೆ, ತಕ್ಷಣ ರಕ್ಷಣೆ ಒದಗಿಸುವುದು, 'ಅಕ್ಕ ಪಡೆ'ಯ, ಉದ್ದೇಶ ಎಂದು, ಧಾರವಾಡ ಜಿಲ್ಲೆ ಉಸ್ತುವಾರಿ ಮಂತ್ರಿ, ಸಂತೋಷ ಲಾಡ ತಿಳಿಸಿದ್ದಾರೆ. ಧಾರವಾಡದ, 'ಸೃಜನಾ', ಅಣ್ಣಾಜಿರಾವ ಸಿರೂರ ರಂಗಮಂದಿರದ ಮುಂಭಾಗದಲ್ಲಿ, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಅವರೊಂದಿಗೆ, ಅಕ್ಕ ಪಡೆಗೆ ಚಾಲನೆ ನೀಡಿ, ಮಾತನಾಡಿದರು. ಮಹಿಳಾ ಗೃಹ ರಕ್ಷಕರನ್ನೊಳಗೊಂಡ ಅಕ್ಕ ಪಡೆ ತಂಡ, ಧಾರವಾಡ ಜಿಲ್ಲಾ ಮಟ್ಟದಲ್ಲಿ, ಪೊಲೀಸರ ಸಹಯೋಗದೊಂದಿಗೆ, ಬೆಳಗ್ಗೆ 7 ಗಂಟೆಯಿಂದ, ರಾತ್ರಿ 8 ರ ವರೆಗೆ, ಎರಡು ಪಾಳಿಗಳಲ್ಲಿ ಕಾರ್ಯನಿರ್ವಹಿಸಲಿದೆ, ಎಂದರು.

<><><>

ಗೃಹ ಬಳಕೆಯ ಎಲ್.ಪಿ.ಜಿ. ಸಿಲಿಂಡರ್ ಸೋರಿ, ಗಾಯಗೊಂಡ, ಆರು ಜನರನ್ನು ಹುಬ್ಬಳ್ಳಿಯ ಕೆ.ಎಂ.ಸಿ. ಆರ್.ಐ. ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಧಾರವಾಡ ಹೊಸಯಲ್ಲಾಪುರದ, ಸುಣ್ಣದ ಭಟ್ಟಿ ಓಣಿಯಲ್ಲಿ, ಇಸ್ಮಾಯಿಲ್ ಹೊನಕೇರಿ ಎಂಬುವವರ ಮನೆಯಲ್ಲಿ, ಈ ಅವಘಡ ಸಂಭವಿಸಿದೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ, ನವಲಗುಂದ ಶಾಸಕ ಎನ್. ಎಚ್. ಕೋನರಡ್ಡಿ ಅವರು, ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು.

<><><>

ಗುರು ಗೋಬಿಂದ್ ಸಿಂಗ್ ಅವರ ಜಯಂತಿ ಇಂದು. ಧೈರ್ಯ, ಸತ್ಯ ಮತ್ತು ಖಾಲ್ಸಾ ಪಂಥದ ಆರಂಭವನ್ನು ಸೂಚಿಸುತ್ತದೆ. ಖಾಲ್ಸಾ ಮತ್ತು ಗುರು ಗ್ರಂಥ ಸಾಹಿಬ್‌ನ ಶಾಶ್ವತ ಬೆಳಕಿನ ಮೂಲಕ, ಇಂದಿನ ಜಗತ್ತಿಗೆ ಸ್ಫೂರ್ತಿ ನೀಡುವ ದಿನವಾಗಿ, ಸಿಖ್ ಬಂಧುಗಳು ಆಚರಿಸುತ್ತಾರೆ. ಗುರುದ್ವಾರಾಗಳಲ್ಲಿ, ವಿಶೇಷ ಪೂಜೆಗಳು ಆಯೋಜಿತವಾಗಿವೆ.

<><><>

ಇಂದು ಲೂಯಿಸ್ ಬ್ರೈಲ್ ಅವರ ಪುಣ್ಯತಿಥಿ. ಫ್ರೆಂಚ್ ಶಿಕ್ಷಕ ಲೂಯಿಸ್, ದೃಷ್ಟಿ ವಿಶೇಷಚೇತನರಿಗಾಗಿ, ಬ್ರೈಲ್ ಲಿಪಿ ಮೂಲಕ, ಓದುವ ಮತ್ತು ಬರೆಯುವ ವ್ಯವಸ್ಥೆ ರೂಪಿಸಿದರು. ತಮ್ಮ ಮೂರನೇ ವಯಸ್ಸಿನಲ್ಲಿ, ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡವರು.

<><><>

ಕರ್ನಾಟಕ ವಿದ್ಯುತ್ ನಿಗಮ, ಒಟ್ಟು 622 ಹುದ್ದೆಗಳ ನೇಮಕಾತಿಗಾಗಿ, ಕಳೆದ ಡಿಸೆಂಬರ್ 27 ಮತ್ತು 28 ರಂದು ನಡೆಸಿದ, ಮರು ಪರೀಕ್ಷೆಯ ತಾತ್ಕಾಲಿಕ ಫಲಿತಾಂಶವನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕೆ.ಇ.ಎ. ಪ್ರಕಟಿಸಿದೆ. ಕನ್ನಡ ಕಡ್ಡಾಯ ಪರೀಕ್ಷೆಯ ಅಂತಿಮ ಅಂಕಪಟ್ಟಿಯನ್ನೂ ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ, ನಾಳೆಯ ಒಳಗಾಗಿ, ಸಲ್ಲಿಸಲು ಸೂಚಿಸಲಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.